# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ: 08221-226430

08221-226551

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಬಿಎಂ ರಸ್ತೆ,
ನಂಜನಗೂಡು-571301.


ಸಂಖ್ಯೆ: ಸಕಾನಿಇಂ (ವಿ)/ಸಇಂ (ತಾ)/2018-19/893-96 ದಿನಾಂಕ:04.07.2018

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ:30.06.2018 ರಂದು ನಂಜನಗೂಡು ಉಪವಿಭಾಗ-1ರ ಕಛೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್ (ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ಸಭಾ ನಡಾವಳಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

| | |
|---|---|
| 1. ಶ್ರೀ ಮುನಿಗೋಪಾಲರಾಜ್ | ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು |
| 2. ಶ್ರೀ ಹೆಚ್.ಕೆ ರಮೇಶ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ವಿಭಾಗ |
| 3. ಶ್ರೀ ಆನಂದ.ಸಿ.ಎಸ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 4. ಶ್ರೀಮತಿ ಹೇಮ.ಬಿ | ಸಹಾಯಕ ಇಂಜಿನಿಯರ್(ತಾಂತ್ರಿಕ) |
| 5. ಶ್ರೀ ಹರೀಶ್ ಕುಮಾರ್ | ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ |
| 6. ಶ್ರೀ ವೀರೇಶ್.ಕೆ.ವಿ | ಸಹಾಯಕ ಇಂಜಿನಿಯರ್ ತಾಂಡವಪುರ ಶಾಖೆ |
| 7. ಶ್ರೀ ಶಶಿಕಿರಣ್ | ಸಹಾಯಕ ಇಂಜಿನಿಯರ್ ಸಿಂದುವಳ್ಳಿಪುರ ಶಾಖೆ |
| 8. ಶ್ರೀ ರಂಗಸ್ವಾಮಿ | ಕಿರಿಯ ಇಂಜಿನಿಯರ್ ಸುತ್ತೂರು ಶಾಖೆ |

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಂಜನಗೂಡು ಉಪವಿಭಾಗ-1 ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಗ್ರಾಹಕರು, ರೈತ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸಿದರು. ನಂತರ ಅಧೀಕ್ಷಕ ಇಂಜಿನಿಯರ್(ವಿ)ರವರು ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕೈಗೊಂಡ

ಕ್ರಮಗಳ ಕುರಿತು ಅನುಪಾಲನ ವರದಿಯನ್ನು ಓದಿ ಹಿಂದಿನ ಸಭೆಯಲ್ಲಿ ಸಲ್ಲಿಸಿದ ದೂರುಗಳಿಗೆ ಕ್ರಮ ಕೈಗೊಂಡಿರುವ ಕುರಿತು ಶಾಖಾಧಿಕಾರಿಗಳು ಮತ್ತು ಗ್ರಾಹಕರೊಂದಿಗೆ ಚರ್ಚಿಸಲಾಯಿತು. ತದನಂತರ ಗ್ರಾಹಕರು ಹೊಸದಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ಅಹವಾಲುಗಳ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ | ಅಹವಾಲುಗಳ ವಿವರ | ಕ್ರಮ |
|---|---|---|---|
| 1 | ಶ್ರೀ ಬಸವರಾಜು ತೊರೆಮಾವು 9483085961 | ತಮ್ಮ ಮನೆಯ ಮುಂದೆ ಬೀದಿ ದೀಪ ಹಾಕಿಸಿಕೊಡುವಂತೆ ಕೋರಿದರು | ತಾಂಡವಪುರ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಗ್ರಾಮ ಪಂಚಾಯಿತಿ ಅಭಿವೃಧ್ಧಿ ಅಧಿಕಾರಿಯವರಿಂದ ಅರ್ಜಿ ಪಡೆದು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 2 | ಶ್ರೀ ಬಂಗಾರಶೆಟ್ಟಿ ಕಳಲೆ 862373764 | ಸದರಿಯವರ ಜಮೀನಿನ ಪಂಪ್‌ಸೆಟ್ ಸಂಪರ್ಕಿತಗೊಂಡಿರುವ ಪರಿವರ್ತಕಕ್ಕೆ 20 ಪಂಪ್‌ಸೆಟ್‌ಗಳು ಸಂಪರ್ಕಿತಗೊಂಡಿರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಬೇಕೆಂದು ಕೋರಿದರು | ಸಿಂಧುವಳ್ಳಿ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 3 | ಶ್ರೀ ಸುರೇಶ ದಲಿತ ಸಂಘರ್ಷ ಸಮಿತಿ ಮುಖಂಡರು ಶಂಕರಪುರ ಹೊಸಬಡಾವಣೆ, ನಂಜನಗೂಡು 9901222673 | 1. ಶಂಕರಪುರ ಹೊಸ ಬಡಾವಣೆಯಲ್ಲಿ 1 ಕಂಬ ಬಾಗಿದೆ<br>2. ರಸ್ತೆ ಸರಿ ಇರುವ ಕಡೆ ಮಾತ್ರ ಕಂಬಗಳನ್ನು ಅಳವಡಿಸಿದ್ದು ರಸ್ತೆ ಸರಿಇಲ್ಲದ ಕಡೆ ಕಂಬಗಳನ್ನು<br>3.ಅಳವಡಿಸುತ್ತಿಲ್ಲ ಹೊಸಬಡಾವಣೆಯಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಬೇಕು ಎಂದು ಕೋರಿದರು | ಪಟ್ಟಣ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |

| | | | |
|---|---|---|---|
| 4 | ಶ್ರೀ ಸತೀಷರಾವ್<br>ಸಿಂಧುವಳ್ಳಿ<br>9972812460 | ಸಿಂಧುವಳ್ಳಿ ಗ್ರಾಮದಲ್ಲಿ ಕೆಲವು ವಿದ್ಯುತ್ ಸಂಪರ್ಕ ಇಲ್ಲದ ಮನೆಗಳಿದ್ದು ಸದರಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು | ಸಿಂಧುವಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 5 | ಶ್ರೀ ಚಿಕ್ಕಣ್ಣ<br>ಪರಿಕಲ್ಪನೆ<br>ಮಾಸಪತ್ರಿಕೆ<br>ಸಂಪಾದಕರು<br>ಹಗಿನವಾಳು ಗ್ರಾಮ<br>8970612047 | 1. ಜನಸಂಪರ್ಕ ಸಭೆ ನಡೆಸುವ ಮಾಹಿತಿಯನ್ನು ಇನ್ನು ಹೆಚ್ಚಿನ ಪತ್ರಗಳಲ್ಲಿ ಪ್ರಕಟಣೆಗೊಳಿಸಲು ಕೋರಿದರು<br>2. ಶಾಖಾ ಕಛೇರಿಯಲ್ಲಿ ಗ್ರಾಹಕರಿಗೆ ಮಾಹಿತಿ ಒದಗಿಸಲು ಕಛೇರಿ ಸಿಬ್ಬಂದಿ ಇರುವುದಿಲ್ಲ ಮಾರ್ಗದಾಳುಗಳೇ ಉತ್ತರಿಸುತ್ತಾರೆ ಎಂದು ದೂರಿದರು<br>3. ಸಕಾಲ ಮತ್ತು ಮಾಹಿತಿ ಹಕ್ಕು ಫಲಕಗಳು ಇರುವುದಿಲ್ಲ<br>4. ವಿದ್ಯುತ್ ಶುಲ್ಕದ ಭಾಕಿ ರೂ.200/- ಗಳಿದ್ದರೂ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಾರೆ<br>5. ಬೀದಿ ದೀಪ ಸ್ಥಾವರ ನೇರ ಸಂಪರ್ಕದಲ್ಲಿರುತ್ತದೆ ಅದೇ ರಿತಿ ಗ್ರಾಹಕರು ನೇರ ವಿದ್ಯುತ್ ಸಂಪರ್ಕ ಪಡೆದಲ್ಲಿ ಅಪರಾಧವೆಂದು ವಿದ್ಯುತ್ ಕಡಿತ ಗೊಳಿಸುತ್ತೀರಿ ಎಂದು ದೂರಿದರು<br>6. ವಿದ್ಯುತ್ ಬಿಲ್‌ನಲ್ಲಿ D&R ಶುಲ್ಕ ಎಂದು ರೂ.20/- ಗಳನ್ನು ಹೆಚ್ಚಾಗಿ ವಿಧಿಸಿರುತ್ತಾರೆ ಎಂದು ದೂರಿದರು | ನಿಗಮದ ನಿಯಾಮನುಸಾರ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು |
| 6 | ಶ್ರೀ ಮಂಜು<br>ಹಳ್ಳಿದಿಡ್ಡಿ<br>9739562458 | 1. ತಮ್ಮ ಜಮೀನಿನ ಕೊಳವೆಬಾವಿಗೆ ಗಂಗಕಲ್ಯಾಣ ಯೋಜನೆಯಡಿ ಅರ್ಜಿ ನೋಂದಾಯಿಸಿದ್ದು ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು<br>2. ಹಳ್ಳಿದಿಡ್ಡಿ ಗ್ರಾಮದಲ್ಲಿ ಕಬ್ಬಿಣದ ಕಂಬ ಸ್ಥಳಾಂತರಿಸಬೇಕು<br>3. ಹಳ್ಳಿದಿಡ್ಡಿ ಗ್ರಾಮದಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಕೆಲವು ಮನೆಗಳಿಗೆ ಸೌಭಾಗ್ಯ/ಡಿಡಿಯುಜಿಜೆವೈ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು | ತಾಂಡವಪುರ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |

| | | | |
|---|---|---|---|
| | ಶ್ರೀ ಗುರುಪ್ರಸಾದ್ ದೇವಾರಳ್ಳಿ | 1. ವಿದ್ಯುತ್ ಸಂಪರ್ಕ ನಿಲುಗಡೆ ಮಾಡುವ ಮಾಹಿತಿಯನ್ನು ಮೊಬೈಲ್ ಫೋನ್ ಮೂಲಕ Message ಕಳುಹಿಸುವಂತೆ ಮಾಡಬೇಕು<br>2. ಸಿಬ್ಬಂದಿ ದೂರವಾಣಿ ಕರೆಗಳನ್ನು ಸ್ವೀಕರಿಸುವುದಿಲ್ಲ<br>3. 63ಕೆವಿಎ ಪರಿವರ್ತಕದ ಮೇಲೆ 10 ಕೊಳವೆಬಾವಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುತ್ತಾರೆ ಎಂಬ ಅಹವಾಲುಗಳನ್ನು ಸಲ್ಲಿಸಿದರು | ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 8 | ಶ್ರೀ ನಾಗರಾಜಾರಾಧ್ಯ ಬಿಳಿಗೆರೆ 9598467301 | ಪರಿವರ್ತಕಗಳನ್ನು ಸಾಗಿಸಲು ವಾಹನದ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೋರಿದರು | ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು |
| 9 | ಶ್ರೀ ದೇವಪುತ್ರ ನೀಲಕಂಠನಗರ, ನಂಜನಗೂಡು 9901353141 | ತಮ್ಮ ನಿವೇಶನದಲ್ಲಿ ವಿದ್ಯುತ್ ಕಂಬವಿದ್ದು ಸ್ಥಳಾಂತರಿಸಿಕೊಡಬೇಕೆಂದು ಕೋರಿದರು | ಪಟ್ಟಣ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |

ಅಧೀಕ್ಷಕ ಇಂಜನಿಯರ್, ಕಾರ್ಯ ಮತ್ತು ಪಾಲನಾ ವೃತ, ಮೈಸೂರು ರವರು ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿ ಗ್ರಾಹಕರು ಮಂಡಿಸಿರುವ ದೂರುಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ತುರ್ತಾಗಿ ಅಗತ್ಯ ಕ್ರಮ ಕೈಗೊಳುವುದಾಗಿ ತಿಳಿಸಿದರು ಹಾಗೂ ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ ಮತ್ತು ಶಾಖಾಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.ಸಹಾಯಕ ಕಾರ್ಯನಿರ್ವಹಕ ಇಂಜನಿಯರ್‌ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

4/7/18

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ-I
ಚಾ.ವಿ.ಸ.ನಿ.ನಿ, ನಂಜನಗೂಡು.

ಪ್ರತಿಯನ್ನು:
1) ಅಧೀಕ್ಷಕ ಇಂಜನಿಯರ್(ವಿ) ಕಾರ್ಯ ಮತ್ತು ಪಾಲನ ವೃತ್ತ, ಕುವೆಂಪುನಗರ ಮೈಸೂರು ರವರ ಅವಗಾಹನೆಗಾಗಿ
2) ಕಾರ್ಯನಿರ್ವಾಹಕ ಇಂಜನಿಯರ್(ವಿ) ಕಾ ಮತ್ತು ಪಾ ವಿಭಾಗ ನಂಜನಗೂಡು ರವರ ಅವಗಾಹನೆಗಾಗಿ
3) ಸಂಬಂದ ಪಟ್ಟ ಶಾಖಾಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮು.ಕಡತ